**OS. No. 73/2024** **DW - 1**

ಪ್ರಮಾಣೀಕರಿಸಲಾದ ದಿನಾಂಕಃ **14.07.2026**
<u>ಪಾಟೀ ಸವಾಲು ವಾದಿ ಪರ ಶ್ರೀ **NJ** ವಕೀಲರಿಂದಃ</u>

(1) ನಾನು ಐಟಿಐ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ಮುದ್ದಲಿಂಗಯ್ಯನವರಿಗೆ ಸಹೋದರರು 4 ಜನ, ಇಬ್ಬರು ಸಹೋದರಿಯರು, ಅವರುಗಳೆಂದರೆ ಶೇಖರಯ್ಯ, ಬಸವರಾಜು, ಮುನಿಯಮ್ಮ, ದುರ್ಗರಾಜ್, ಕೃಷ್ಣಮೂರ್ತಿ , ವಿನೋದ. ಮತ್ತೊಬ್ಬರು ಜಗದೀಶ್ ಎನ್ನುವವರು ವಿವಾಹವಾಗದೆ ಮೃತಪಟ್ಟಿರುವುದು ನನಗೆ ತಿಳಿದಿರುತ್ತದೆ. ನನಗೆ ಉಪ್ಪಾರ ಹಳ್ಳಿ ಗ್ರಾಮದ ಐಟಂ ನಂ. 1, 2, 3 ಆಸ್ತಿಯ ಬಗ್ಗೆ ಏನು ಗೊತ್ತಿಲ್ಲ. ಐ .ನಂ. 4 ಆಸ್ತಿಯು ಮೂಲತಃ ಹನುಮಂತಯ್ಯನಿಗೆ ಸೇರಿದ್ದಾಗಿರುತ್ತದೆ. ಸದರಿ ಹನುಮಂತಯ್ಯರವರು ಕುರಿಹಟ್ಟಿಯವರು. ಸದರಿ ಹನುಮಂತಯ್ಯನವರ ಮಗಳೇ ವಾದಿ ಮತ್ತು ಪ್ರತಿವಾದಿಯರ ತಾಯಿ ಎಂದರೆ ಸರಿ. ವಾದಿ ದುರ್ಗರಾಜು ಮತ್ತು ನನ್ನ ತಂದೆಯರು ಕುರಿಹಟ್ಟಿಯಲ್ಲಿ ವಾಸಮಾಡಿಕೊಂಡು ಇದ್ದರು ಎಂದರೆ ವಾದಿ ದುರ್ಗರಾಜ್ ವಾಸವಿರಲಿಲ್ಲ, ನಮ್ಮ ತಂದೆ ಮುದ್ದಲಿಂಗಯ್ಯ ಮಾತ್ರ ವಾಸವಿದ್ದರು ಎಂದು ನುಡಿದಿರುತ್ತಾರೆ. ಪ್ರತಿವಾದಿ 1 ಮತ್ತು 2 ಹಾಗೂ 5 ರವರು ಉಪ್ಪಾರಹಳ್ಳಿ ಯಲ್ಲಿ ವಾಸವಿದ್ದರು ಎಂದರೆ ಸರಿ. ಪ್ರತಿವಾದಿ 3 ಮತ್ತು 6 ರವರನ್ನು ಕುರಿಹಟ್ಟಿ ಗ್ರಾಮದವರಿಗೆ ವಿವಾಹ ಮಾಡಿಕೊಟ್ಟಿದ್ದರು ಎಂದರೆ ಸರಿ.

(2) ವಾದಿಯ ತಂದೆ ಲಕ್ಷ್ಮಯ್ಯರವರ ಜೀವಿತಾವಧಿಯಲ್ಲಿಯೇ ಕುರಿಹಟ್ಟಿ ಗ್ರಾಮದಲ್ಲಿ 5 ಎಕರೆ ಸರ್ಕಾರಿ ಜಮೀನನ್ನು ಅಭಿವೃದ್ಧಿ ಪಡಿಸಿ ತೆಂಗನ್ನು ಬೆಳೆಯಲಾಗುತ್ತಿತ್ತು ಎಂದರೆ ಸರಿಯಲ್ಲ. ಲಕ್ಷ್ಮಯ್ಯರವರ ಜೀವಿತಾವಧಿಯಲ್ಲಿಯೇ ಅದರಿಂದ ಸುಮಾರು 5-6 ಲಕ್ಷ ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ಹನುಮಂತಯ್ಯನವರಿಗೆ ಮುದ್ದಲಿಂಗಯ್ಯನವರಿಗೆ ವಿಲ್ ಮಾಡುವ ಯಾವುದೇ ಉದ್ದೇಶ ಅಥವಾ ಇಚ್ಚೆ ಇರಲಿಲ್ಲ ನಾನು ಮತ್ತು ನನ್ನ ತಂದೆ ಅವರನ್ನು ಉದ್ದೇಶಪೂರ್ವಕವಾಗಿ ಅವರನ್ನು ಕರೆದುಕೊಂಡು ಹೋಗಿ ಒತ್ತಾಯವಾಗಿ ವಿಲ್ ಬರೆಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಹನುಮಂತಯ್ಯನವರು ಅವರ ಜೀವಿತಾವಧಿಯಲ್ಲಿ ಹಲವಾರು ಬ್ಯಾಂಕುಗಳಲ್ಲಿ ಸಾಲವನ್ನು ಪಡೆದುಕೊಂಡಿದ್ದು ಅವರಿಗೆ ಗಂಡು ಮಕ್ಕಳಿಲ್ಲ ಎಂಬ ಕಾರಣಕ್ಕೆ ನಮ್ಮ ತಂದೆ ವಿದ್ಯಾವಂತರಾಗಿದ್ದು ಅದನ್ನು ದುರುಪಯೋಗಪಡಿಸಿಕೊಂಡು ವಿಲ್ ಅನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹನುಮಂತಯ್ಯನವರಿಗೆ ವಯಸ್ಸಾಗಿದ್ದು ಕಾಯಿಲೆಗೆ ತುತ್ತಾಗಿದ್ದು ಅವರಿಗೆ ಏನು ಮಾಡುತ್ತೇನೆ ಎಂದು ತಿಳಿದುಕೊಳ್ಳಲು ಸಾಧ್ಯವಿರದ ಸಮಯದಲ್ಲಿ ಅದನ್ನು ದುರುಪಯೋಗ ಪಡಿಸಿಕೊಂಡು ನಮ್ಮ ತಂದೆ ವಿಲ್ ಸೃಷ್ಟಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

(3) ವಾದಿ ಮತ್ತು ಪ್ರತಿವಾದಿಯವರು ಇಲ್ಲಿಯವರೆಗೂ ಯಾವುದೇ ವಿಭಾಗ ಪತ್ರ ಮಾಡಿಕೊಂಡಿರುವುದಿಲ್ಲ. 4 ಮತ್ತು 6 ನೇ ಪ್ರತಿವಾದಿಯರಿಗೆ ಯಾವುದಾದರೂ ಭಾಗ ನೀಡಲಾಗಿದೆಯಾ ಎಂದರೆ ಉಪ್ಪಾರಹಳ್ಳಿ ಗ್ರಾಮದ ಆಸ್ತಿಗಳ ಬಗ್ಗೆ ನನಗೆ ಅಷ್ಟು ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಉಪ್ಪಾರಹಳ್ಳಿಯ ಆಸ್ತಿಗಳು ಇಲ್ಲಿಯವರೆಗೂ ಸಹ ವಾದಿಯ ತಾಯಿ ನಿಂಗಮ್ಮನವರ ಹೆಸರಿನಲ್ಲಿ ಇರುತ್ತದೆ ಎಂದರೆ ಗೊತ್ತಿಲ್ಲ. ನನಗೆ ನನ್ನ ತಾಯಿ ಅಧಿಕಾರ ಪತ್ರ ನೀಡುವ ಸಮಯಕ್ಕೆ ಉಪ್ಪಾರಹಳ್ಳಿಯ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ.

(4) ಖಾತೆ ಮಾಡಿಸಿಕೊಳ್ಳುವ ಸಮಯದಲ್ಲಿ ವಾದಿ ಮತ್ತು ಉಳಿದ ಪ್ರತಿವಾದಿಯವರು ಪ್ರಶ್ನಿಸಿದ್ದು ನಂತರ ಭಾಗ ಮಾಡಿಕೊಳ್ಳೋಣ ಎಂದು ಹೇಳಿ ಅದರ ಮೇಲೆ ಸಾಲ ಪಡೆಯಲಾಗಿದೆ ಎಂದರೆ ಸರಿಯಲ್ಲ. ನಮ್ಮ ತಂದೆ ಮೃತಪಟ್ಟ ನಂತರ ಐಟಂ ನಂ. 4 ಆಸ್ತಿಯ ಖಾತೆಯು ನಮ್ಮ ತಾಯಿಯ ಹೆಸರಿಗೆ ಬದಲಾವಣೆಯಾಗಿರುತ್ತದೆ. ಆ ಸಮಯದಲ್ಲಿ ಸಹ ವಾದಿ ಮತ್ತು ಉಳಿದ ಪ್ರತಿವಾದಿಯರು ಪ್ರಶ್ನೆ ಮಾಡಿದ್ದರು ಎಂದರೆ ಸರಿಯಲ್ಲ. ಐಟಂ ನಂ. 4 ಆಸ್ತಿಯು ಲಕ್ಷ್ಮಯ್ಯರವರ ಆಸ್ತಿಯಲ್ಲ ಅದು ಅವರ ಪತ್ನಿ ನಿಂಗಮ್ಮನವರಿಗೆ ಅವರ ತಂದೆಯ ಕಡೆಯಿಂದ ಬಂದ ಆಸ್ತಿಯಾಗಿದ್ದು ಅವರಿಗೆ ವಾದಿಯವರು ಹಾಗೂ ಪ್ರತಿವಾದಿಯವರು ಎಲ್ಲರೂ ಕಾನೂನುಬದ್ಧ ವಾರಸುದಾರರಾಗಿದ್ದು ಸದರಿ ಆಸ್ತಿಗೆ ವಿಲ್ ಅನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

(5) ನನ್ನ ತಾಯಿ ಸೇರಿದಂತೆ ಉಳಿದ ವಾದಿ ಮತ್ತು ಪ್ರತಿವಾದಿಯರೆಲ್ಲರಿಗೆ ಐಟಂ ನಂ. 1 ರಿಂದ 3 ಆಸ್ತಿಗಳಲ್ಲಿ ಸಮಾನ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮಯ್ಯನವರ ಕಾಲದಲ್ಲಿಯೇ ಅಭಿವೃದ್ಧಿ ಪಡಿಸಿದ ಐಟಂ ನಂ. 1 ರಿಂದ 3 ರ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಯವರು ತಮ್ಮ ಹೆಸರಿಗೆ ಅರ್ಜಿ ನೀಡಿ ಅವರ ಹೆಸರಿಗೆ ಮಂಜೂರು ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ದಾವಾ ಆಸ್ತಿಗಳಲ್ಲಿ ವಾದಿಯವರಿಗೂ ಮತ್ತು ಪ್ರತಿವಾದಿಯರಿಗೆ ಸಮಪಾಲು ಇದ್ದು ನಾನು ಹೇಳುವ ವಿಲ್ ಊರ್ಜಿತವಲ್ಲ ಎಂದರೆ ಸರಿಯಲ್ಲ. ನಿಂಗಮ್ಮನವರ ಹೆಸರಿಗೆ ಆಸ್ತಿ ಇರುವ ಕಾರಣ ಸದರಿ ಆಸ್ತಿಯಲ್ಲಿ ಹಾಗೂ ಉಳಿದ ದಾವಾ ಆಸ್ತಿಗಳಲ್ಲಿಯೂ ಸಹ ಎಲ್ಲರಿಗೆ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ಎಲ್ಲಾ ಎರಡೂ ಊರಿನ ಆಸ್ತಿಗಳ ಬಗ್ಗೆ ಸರಿಯಾದ ಮಾಹಿತಿ ನನಗೆ ಗೊತ್ತಿದ್ದು ಸತ್ಯಾಂಶವನ್ನು ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.** (ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)
ಓ.ಹೇ.ಕೇ.ಸರಿ ಇದೆ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ